ಕರ್ನಾಟಕ ವಿಧಾನ ಪರಿಷತ್ತು

1) ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : 1376
2) ಸದಸ್ಯರ ಹೆಸರು : ಶ್ರೀ ಕೆ.ಎ. ತಿಪ್ಪೇಸ್ವಾಮಿ (ನಾಮನಿರ್ದೇಶನ ಹೊಂದಿದವರು)
3) ಉತ್ತರಿಸುವ ದಿನಾಂಕ: : 23-09-2021
4) ಉತ್ತರಿಸುವವರು : ಮಾನ್ಯ ಮುಖ್ಯಮಂತ್ರಿಗಳು

ಕ್ರ ಸಂ.	ಪ್ರಶ್ನೆ	ಉತ್ತರ
ಅ)	ರಾಜ್ಯದಲ್ಲಿ GST ತೆರಿಗೆ ಕಾಯಿದೆ ಜಾರಿಗೆ ಬಂದ ನಂತರ ತೆರಿಗೆ ವಂಚನೆ ಮಾಡಿರುವ ಪ್ರಕರಣಗಳೆಷ್ಟು; ಮತ್ತು ಈ ತೆರಿಗೆ ವಂಚನೆ ರೀತಿ-ಸ್ವರೂಪಗಳು ಯಾವುವು;	ತೆರಿಗೆ ವಂಚನೆ ಮಾಡಿರುವ ಪ್ರಕರಣಗಳು 31,693. 1) ಲೆಕ್ಕಪುಸ್ತಕಗಳಲ್ಲಿನ ವಹಿವಾಟಿಗಿಂತ ಮಾಸಿಕ ನಮೂನೆಗಳಲ್ಲಿ ಕಡಿಮೆ ವಹಿವಾಟು ವರದಿ ಮಾಡಿಕೊಂಡಿರುವುದು. 2) ತೆರಿಗೆದಾಯಕ ವಹಿವಾಟನ್ನು ತೆರಿಗೆ ವಿನಾಯಿತಿ ವಹಿವಾಟು ಎಂದು ಮಾಸಿಕ ನಮೂನೆಗಳಲ್ಲಿ ವರದಿ ಮಾಡಿಕೊಂಡಿರುವುದು. 3) ನಕಲಿ ದಾಖಲಾತಿಗಳನ್ನು ಸೃಷ್ಟಿಸಿ ತೆರಿಗೆ ವಂಚಿಸಿರುವ ಪ್ರಕರಣಗಳು. 4) ಖರೀದಿ ಪಟ್ಟಿಗಳು ಇಲ್ಲದೇ ಸರಕು ದಾಸ್ತಾನು ಸಂಗ್ರಹಿಸುವಿಕೆ ಪ್ರಕರಣಗಳು. 5) ಸಂಗ್ರಹಿಸಿದ ರಾಜಸ್ವದ ಮೇಲೆ ತೆರಿಗೆ ಪಾವತಿಸದೇ ಇರುವ ಪ್ರಕರಣಗಳಲ್ಲಿ ತೆರಿಗೆ ವಿಧಿಸಿ ಸಂಗ್ರಹಿಸುವುದು. 6) ಟಿಡಿಎಸ್/ಟಿಸಿಎಸ್‌ಯಲ್ಲಿ ಘೋಷಿಸಿಕೊಂಡಿರುವ ವಹಿವಾಟು ಮಾಸಿಕ ವರದಿಗಳಲ್ಲಿ ದೃಢೀಕರಿಸಿಕೊಂಡಿರುವುದಿಲ್ಲ. 7) ಇ-ವೇ ಬಿಲ್ಲು ಜನರೇಟ್ ಮಾಡಿದ ವಹಿವಾಟಿಗೂ ಮಾಸಿಕ ವರದಿಯಲ್ಲಿ ವರದಿ ಮಾಡಿಕೊಂಡ ವಹಿವಾಟಿಗೂ ವ್ಯತ್ಯಾಸವಿರುವುದು. 8) ವಾಸ್ತವ ಹೂಡುವಳಿ ತೆರಿಗೆಗಿಂತ ಹೆಚ್ಚಿಗೆ ಹೂಡುವಳಿ ತೆರಿಗೆ ವರದಿ ಮಾಡಿಕೊಂಡಿರುವುದು.

ಮು.ತಿ.ನೋ.

ಆ)	ರಾಜ್ಯದಲ್ಲಿ ಇತ್ತೀಚಿನ ದಿನಗಳಲ್ಲಿ GST ಮರುಪಾವತಿಗಾಗಿ ಸುಳ್ಳು ದಾಖಲೆ (Bogus Invoices)ಗಳನ್ನು ಸೃಷ್ಟಿಸಿ ಪಡೆದುಕೊಳ್ಳುವ ಪ್ರಕರಣಗಳು ಹೆಚ್ಚಾಗುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; ಹಾಗಿದ್ದಲ್ಲಿ ಪೂರ್ಣ ವಿವರ ನೀಡುವುದು;	ಹೌದು 1) ಅಂತಹ ಪ್ರಕರಣಗಳಲ್ಲಿ ತಪಾಸಣೆ ಕೈಗೊಂಡು ಅವರ ನೋಂದಣಿಯನ್ನು ರದ್ದುಪಡಿಸಲಾಗಿದೆ ಮತ್ತು ಅವರ ಕೊನೆಯ ಉಪಯೋಗ ಪಡೆದಿರುವ ವರ್ತಕರಿಂದ ಹೂಡುವಳಿ ತೆರಿಗೆ ಸರ್ಕಾರಕ್ಕೆ ಹಿಂಪಡೆಯಲಾಗಿದೆ. 2) ಜುಲೈ 2017 ರಿಂದ ಇಲ್ಲಿಯವರೆಗೆ ಬೋಗಸ್ ಇನ್‌ವಾಯ್ಸ್ ನೀಡಿದವರ ಅಂಗಡಿಗಳ ತಪಾಸಣೆಯನ್ನು ಆದ್ಯತೆಮೇಲೆ ಕೈಗೊಂಡು ಇದರಲ್ಲಿ ಶಾಮೀಲಾಗಿರುವ ಕೆಲವರನ್ನು ಬಂಧನಕ್ಕೆ ಒಳಪಡಿಸಲಾಗಿದೆ ಹಾಗೂ ವಂಚನೆಯಾಗಿರುವ ತೆರಿಗೆಯ ವಸೂಲಾತಿಗೆ ಕ್ರಮ ಕೈಗೊಳ್ಳಲಾಗುತ್ತಿದೆ.
ಇ)	ರಾಜ್ಯದಲ್ಲಿ ಇಂತಹ ಪ್ರಕರಣಗಳನ್ನು ತಡೆಗಟ್ಟಲು ಸರ್ಕಾರ ರೂಪಿಸಿರುವ ಕಟ್ಟುನಿಟ್ಟಿನ ಕ್ರಮಗಳೇನು; (ವಿವರ ನೀಡುವುದು)	ಸರ್ಕಾರ ರೂಪಿಸಿರುವ ಕಟ್ಟುನಿಟ್ಟಿನ ಕ್ರಮಗಳು: 1) ಇಲಾಖೆಯ ಅಧಿಕಾರಿಗಳು ಬೋಗಸ್ ಪ್ರಕರಣಗಳಲ್ಲಿ ತಪಾಸಣೆ ನಡೆಸಿ ಅಂತಹ ವರ್ತಕರಿಗೆ ಜಿ.ಎಸ್.ಟಿ. ಕಾಯ್ದೆಯಡಿ ಕಾನೂನು ಪ್ರಕಾರ ಸೂಕ್ತ ತೆರಿಗೆ/ದಂಡ ವಿಧಿಸುವ ಕ್ರಮ ಕೈಗೊಳ್ಳಲಾಗಿದೆ. 2) ಬೋಗಸ್ ವರ್ತಕರ ನೋಂದಣಿ ರದ್ದುಗೊಳಿಸಲು ಕ್ರಮ ಕೈಗೊಳ್ಳಲಾಗಿದೆ. 3) ಸುಳ್ಳು ದಾಖಲೆಗಳನ್ನು ಸೃಷ್ಟಿಸಿ ವಹಿವಾಟು ಮಾಡುವ ವರ್ತಕರಿಂದ ಖರೀದಿ ಮಾಡಿ ಪಡೆದ ಹೂಡುವಳಿ ತೆರಿಗೆಯನ್ನು ಇಲಾಖೆಗೆ ಮರುಪಾವತಿಸಲು ಕ್ರಮ ಕೈಗೊಳ್ಳಲಾಗಿದೆ. 4) ದಾಖಲೆ ಇಲ್ಲದೆ ಅಥವಾ ತಪ್ಪು ದಾಖಲೆಗಳೊಂದಿಗೆ ಸರಕು ಸಾಗಣೆ ಮಾಡುವ ವಾಹನಗಳನ್ನು ಪತ್ತೆ ಹಚ್ಚಿ ಸೂಕ್ತ ತೆರಿಗೆ/ದಂಡ ವಿಧಿಸಿ ಕ್ರಮ ಕೈಗೊಳ್ಳಲಾಗಿದೆ.
ಈ)	ರಾಜ್ಯದಲ್ಲಿ ಒಂದು ಕೋಟಿ ರೂ.ಗಳಿಗಿಂತ ಹೆಚ್ಚು ವಹಿವಾಟು ನಡೆಸುವ ಉದ್ಯಮಗಳಿಂದ ಶೇ.80 ರಷ್ಟು GST ವಸೂಲಿಯಾಗುತ್ತಿದೆ ಎನ್ನುವುದು ನಿಜವೇ? ಹಾಗಿದ್ದಲ್ಲಿ, ವಿವರ ನೀಡುವುದು)	ಹೌದು. ಒಂದು ಕೋಟಿ ರೂ.ಗಳಿಗಿಂತ ಹೆಚ್ಚು ವಹಿವಾಟು ಇರುವ ತೆರಿಗೆದಾಯಕ ವರ್ತಕರ ಸಂಖ್ಯೆ 1,26,727 ಇದ್ದು, ಸದರಿ ವರ್ತಕರುಗಳಿಂದ ರೂ.37,106 ಕೋಟಿ ತೆರಿಗೆ ಸಂಗ್ರಹಣೆಯಾಗಿದ್ದು, ಇದು ರಾಜ್ಯದ ಒಟ್ಟು ಜಿ.ಎಸ್.ಟಿ. ಸಂಗ್ರಹಣೆಯ ಶೇಕಡ 88.03 ಆಗಿರುತ್ತದೆ.

ಸಂಖ್ಯೆ: ಆಇ 84 ಸಿಎಸ್‌ಎಲ್ 2021

(ಬಸವರಾಜ ಬೊಮ್ಮಾಯಿ)
ಮುಖ್ಯಮಂತ್ರಿ